**ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರ ಕಛೇರಿ,**

**ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು– 560 004**

ಸಂಖ್ಯೆ: ಎಡಿಎಫ್/ಎಡಿಸಿ/52/2012-13. ದಿನಾಂಕ:೨೦-01-2017

ಎರಡು ವಿಭಾಗದ ಜಂಟಿ ನಿರ್ದೇಶಕರುಗಳಿಗೆ,
ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ,
ಎಲ್ಲಾ ಉಪವಿಭಾಗೀಯ ಸಹಾಯಕ ನಿರ್ದೇಶಕರುಗಳಿಗೆ,
ಎಲ್ಲಾ ಸನ್ನದು ಲೆಕ್ಕಪರಿಶೋಧಕರುಗಳಿಗೆ

ಮಾನ್ಯರೇ,

ವಿಷಯ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63ರಡಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಸಂಘದ ಮಹಾಸಭೆಯ ನಿಗದಿಪಡಿಸುವ ಬಗ್ಗೆ ಮಾರ್ಗಸೂಚಿಗಳು – ಹೊರಡಿಸುವ ಕುರಿತು.

ಉಲ್ಲೇಖ: 1) ನಿರ್ದೇಶನಾಲಯದ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/ 2012-13 ದಿನಾಂಕ:21-09-2013.
2) ಸರ್ಕಾರದ ಪತ್ರ ಸಂಖ್ಯೆ:ಸಿಓ/92/ಸಿಎಲ್ಎಂ/2016, ದಿನಾಂಕ 19-12-2016.

******

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಸಂಭಾವನೆಯ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಮಾರ್ಗಸೂಚಿಯ ಪುಟ-3ರ ಷರತ್ತಿನ ಕ್ರಮಸಂಖ್ಯೆ 2ರಲ್ಲಿ "ಪ್ರತಿಯೊಂದು ಸಹಕಾರ ಸಂಘವು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂದು ಇರುತ್ತದೆ.

ಮುಂದುವರೆದಂತೆ, ಸರ್ಕಾರವು ಉಲ್ಲೇಖ (2)ರ ಪತ್ರದಲ್ಲಿ "ಪ್ರತಿಯೊಂದು ಸಹಕಾರ ಸಂಘವು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ಷರತ್ತನ್ನು ತೆಗೆದುಹಾಕಿರುತ್ತದೆ. ಆದ್ದರಿಂದ ಇನ್ನು ಮುಂದೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಅವಕಾಶವಿರುವುದಿಲ್ಲ. ಉಲ್ಲೇಖ (1)ರ ಈ ನಿರ್ದೇಶನಾಲಯದ ಮಾರ್ಗಸೂಚಿಗಳನ್ವಯ ಲೆಕ್ಕಪರಿಶೋಧನೆ ನಿರ್ವಹಿಸಿದ ಲೆಕ್ಕಪರಿಶೋಧಕರಿಗೆ/ಸನ್ನದು ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆ ಪಾವತಿಸತಕ್ಕದ್ದು.

ಉಳಿದಂತೆ ಉಲ್ಲೇಖ (1)ರ ಮಾರ್ಗಸೂಚಿಯಲ್ಲಿನ ಎಲ್ಲಾ ಅಂಶಗಳು ಯಾವುದೇ ಬದಲಾವಣೆ ಇಲ್ಲದೇ ಮುಂದುವರೆದಿರುತ್ತದೆ. ಉಲ್ಲೇಖ (2)ರ ಸರ್ಕಾರದ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು (ಅಪ್ರ)
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

D:\Shruthi\Audit Fee\Ramesh\Letter-A.Fee.docx